# ‘ಹಚ್ಚಹಸಿರ ಮೈಸೂರು ವಿವೇಕಪ್ರಭೆಯ ಮೈಸೂರು’ - ವರದಿ

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಸೆಪ್ಟೆಂಬರ್ ೨೬ರಿಂದ ವಿನೂತನ ಪರಿಸರ ಅಭಿಯಾನವನ್ನು ಪ್ರಾರಂಭಿಸಿತು. **‘ಮೈಸೂರು ಹಸಿರಾಗಲಿ, ವಿವೇಕ ನಮ್ಮ ಉಸಿರಾಗಲಿ’** ಈ ಧ್ಯೇಯವಾಕ್ಯದೊಂದಿಗೆ ಆಶ್ರಮದ ಪರಿಸರ ಪ್ರೇಮಿ, ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಸುರೇಶಾನಂದಜಿ ಮಹಾರಾಜ್ ಅವರ ಸ್ಮರಣಾರ್ಥ ವಿನೂತನವಾದ ಕಾರ್ಯಕ್ರಮವನ್ನು ಕೈಗೊಂಡಿತು.

**‘ಹಚ್ಚ ಹಸಿರ ಮೈಸೂರು’** ಎಂಬ ಕಾರ್ಯಕ್ರಮವನ್ನು ಆಯೋಜಿಸಿ ಗಿಡ-ಮರಗಳನ್ನು ಬೆಳೆಸಿ ಪ್ರೋತ್ಸಾಹಿಸಲು, ಉಚಿತವಾಗಿ ಸಸಿ ವಿತರಣೆಯ ಸೇವೆಗೆ ಮುಂದಾಗಿ, ಸುಮಾರು ೨೫೦೦೦ ಸಸಿಗಳನ್ನು ಉಚಿತವಾಗಿ ಸಾರ್ವಜನಿಕರಿಗೆ ವಿತರಿಸಲು ತೀರ್ಮಾನಿಸಲಾಗಿತ್ತು. ಈ ಅಭಿಯಾನಕ್ಕೆ ಅಭೂತಪೂರ್ವ ಸ್ಪಂದನೆ ಜನರಿಂದ ದೊರೆತು, ಸೆಪ್ಟೆಂಬರ್ ೨೬ರಿಂದ ನವೆಂಬರ್ ೩೦ರ ವರೆಗೆ ವಿವಿಧ ರೀತಿಯ ೪೧,೨೯೮ ಗಿಡಗಳನ್ನು ೬೭೮೫ ಜನರಿಗೆ ವಿತರಿಸಲಾಗಿದೆ. ಸಸಿ ವಿತರಣೆಯನ್ನು ಶ್ರೀರಾಮಕೃಷ್ಣ ಆಶ್ರಮ; ಶ್ರೀರಾಮಕೃಷ್ಣ ವಿದ್ಯಾಶಾಲೆ, ಯಾದವಗಿರಿ; ವಿವೇಕಸ್ಮಾರಕ, ನಾರಾಯಣ ಶಾಸ್ತ್ರಿ ರಸ್ತೆ; ರಾಮಕೃಷ್ಣ ವಿದ್ಯಾಕೇಂದ್ರ, ರಾಮಕೃಷ್ಣ ನಗರ — ಈ ಸ್ಥಳಗಳಲ್ಲಿ ಪ್ರತಿ ದಿವಸ ಬೆಳಿಗ್ಗೆ ೧೦.೦೦ ರಿಂದ ೧೨.೦೦, ಮಧ್ಯಾಹ್ನ ೩.೦೦ ರಿಂದ ಸಂಜೆ ೦೫.೩೦ ರವರೆಗೆ ಮಾಡಲಾಗುತ್ತಿತ್ತು.

**‘ವಿವೇಕಪ್ರಭೆಯ ಮೈಸೂರು’** ಎಂಬ ಧ್ಯೇಯದಡಿ ಕೇವಲ ಪರಿಸರ ಮಾತ್ರ ಶುದ್ಧವಾಗಿರದೆ, ಮನಸ್ಸು ಪರಿಶುದ್ಧವಾಗಿರಬೇಕೆಂದು ಮನಗಂಡು ಮಾನಸಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಪ್ರಗತಿ ಸಾಧಿಸಲು, ನಮ್ಮ ವಿವೇಕ ಬುದ್ಧಿಯನ್ನು ಜಾಗೃತಗೊಳಿಸಲು **‘ವಿವೇಕಪ್ರಭ’** ಮಾಸಪತ್ರಿಕೆಯನ್ನು ಸಸಿ ತಗೆದುಕೊಂಡು ಹೋಗಲು ಬಂದ ಪ್ರತಿಯೊಬ್ಬರಿಗೂ ನೀಡಲಾಗಿದೆ. ದಿವ್ಯತ್ರಯರ ಜೀವನ-ಸಂದೇಶಗಳನ್ನೊಳಗೊಂಡ **‘ಸ್ಫೂರ್ತಿ’** ಪುಸ್ತಕವನ್ನೂ, ಉಚಿತವಾಗಿ ಸಾರ್ವಜನಿಕರಿಗೆ ವಿತರಿಸಿ ಸ್ಪರ್ಧೆಯನ್ನು ಅಯೋಜಿಸಿ, ವಿಜೇತರಾದವರಿಗೆ ಪ್ರಥಮ ಬಹುಮಾನ ರೂ. ೬೦೦೦, ದ್ವಿತೀಯ ಬಹುಮಾನ ರೂ. ೫೦೦೦, ತೃತೀಯ ಬಹುಮಾನ ರೂ. ೩೦೦೦ ಹಾಗೂ ೩೧ ಸಮಾಧಾನಕರ ಬಹುಮಾನಗಳನ್ನು ನೀಡಲಾಗಿದೆ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಆಧ್ಯಾತ್ಮಿಕವಾಗಿ, ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕಳೆದ ೯೫ವರ್ಷಗಳಿಂದ ತನ್ನದೇ ಆದ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಪರಿಸರ ಹಸಿರಾಗಿ, ವಿವೇಕ ನಮ್ಮ ಉಸಿರಾಗಿ ಉಳಿದರೆ ನಮ್ಮ ಮುಂದಿನ ಜನಾಂಗಕ್ಕೆ ಬೇರೊಂದು ಕಾಣಿಕೆಯ ಆವಶ್ಯಕತೆಯಿಲ್ಲ ; ನಮ್ಮ ಸುತ್ತಣ ಪರಿಸರದ ಕುರಿತು ಕನಿಷ್ಠ ಕಳಕಳಿ, ಸೌಜನ್ಯತೆಯನ್ನು ತೋರಿದರೆ ಬದುಕಿನ ಮುಂದಿನ ದಾರಿಯು ಹಚ್ಚಹಸಿರಾಗಿ ಉಳಿಯುತ್ತದೆ ಎಂಬ ಆಶಯದೊಂದಿಗೆ ಈ **‘ಹಚ್ಚ ಹಸುರಿನ ಮೈಸೂರು, ವಿವೇಕಪ್ರಭೆಯ ಮೈಸೂರು’** ಅಭಿಯಾನವು ಎರಡು ತಿಂಗಳ ಕಾಲ ನಡೆದು ಸಾರ್ಥಕತೆಯನ್ನು ಕಂಡಿತು.









Managing Editor : Swami Muktidananda

Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020